ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 115-120
Bi-Monthly, Peer-Reviewed, Open Access, Indexed Journal

ISSN: 2583-3510

SIRDF
JOURNALS
editor@srujani.in
www.srujani.in

# ಆದಿಕರ್ನಾಟಕ ಸಮುದಾಯದ ಕೃಷಿ ಜೀವನ: ಒಂದು ಅಧ್ಯಯನ

**ರಾಜೇಂದ್ರ ಕುಮಾರ್***

*ಸಂಶೋಧನಾ ವಿದ್ಯಾರ್ಥಿ (ಸಮಾಜಕಾರ್ಯ), ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***

*ಭಾರತದ ಸಾಮಾಜಿಕ ಜಾತಿ ವ್ಯವಸ್ಥೆಯಲ್ಲಿ ವೇದಗಳ ಕಾಲದಿಂದಲೂ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ತುಳಿತಕ್ಕೆ ಒಳಗಾಗಿರುವ ಅಥವಾ ಹಿಂದುಳಿದ ಜನ ಸಮುದಾಯವೆಂದರೆ ಪರಿಶಿಷ್ಟ ಜಾತಿಯವರಾಗಿದ್ದಾರೆ. ಅದರಲ್ಲೂ ಹೊಲೆಯ ಮತ್ತು ಮಾದಿಗ ಸಮುದಾಯದವರಾಗಿದ್ದಾರೆ. ಇವರನ್ನು ಅಸ್ಪೃಶ್ಯರು, ಅತಿಶೂದ್ರರು, ಪಂಚಮರು, ಅಂತ್ಯಜರ, ಹರಿಜನರು ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. 1935ರ ಭಾರತ ಸರ್ಕಾರದ ಕಾಯಿದೆಯಲ್ಲಿ ಈ ಅಸ್ಪೃಶ್ಯ ಸಮುದಾಯಗಳನ್ನು ಡಿಪ್ರೆಸ್ಡ್‌ಕ್ಲಾಸ್ ಎಂದು ಪಟ್ಟಿಮಾಡಿ ಕಾನೂನಾತ್ಮಕ ಬೆಂಬಲವನ್ನು ನೀಡಲಾಯಿತು. ನಂತರ ಸ್ವಾತಂತ್ರ್ಯ ನಂತರ ಸಂವಿಧಾನಾತ್ಮಕವಾಗಿ ಪರಿಶಿಷ್ಟ ಜಾತಿಗಳ ಪಟ್ಟಿಗೆ ಸೇರಿಸಿ ಅವರ ಸಬಲೀಕರಣಕ್ಕಾಗಿ ವಿವಿಧ ರೀತಿಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಆದರೂ ಶತಮಾನಗಳಿಂದಲೂ ಶೋಷಣೆಗೆ ಒಳಪಟ್ಟಿರುವ ಈ ಸಮುದಾಯದವರು ಇಂದಿಗೂ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದ್ದಾರೆ. ಇವರು ತಮ್ಮ ಜೀವನೋಪಾಯಕ್ಕಾಗಿ ಪ್ರಮುಖವಾಗಿ ಕೃಷಿ ಮತ್ತು ಕೃಷಿಕೂಲಿಯನ್ನು ಅವಲಂಬಿಸಿಕೊಂಡಿದ್ದಾರೆ. ಈ ಹಿನ್ನಲೆಯಲ್ಲಿ ಮೈಸೂರು ಜಿಲ್ಲೆಯ ಕಾಡಂಚಿನ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಆದಿಕರ್ನಾಟಕ (ಹೊಲೆಯ) ಸಮುದಾಯದ ಕೃಷಿ ಜೀವನವನ್ನು ವಿಶ್ಲೇಷಿಸಲಾಗಿದೆ.*

**Keywords:** *ಆದಿಕರ್ನಾಟಕ, ಕೃಷಿ, ಶೋಷಣೆ, ಕಾಡಂಚಿನ ಗ್ರಾಮಗಳು, ಪರಿಶಿಷ್ಟ ಜಾತಿ.*

## ಪೀಠಿಕೆ

ಕಾಡುಮೇಡುಗಳಲ್ಲಿ ಅಲೆಯುತ್ತಾ ಗೆಡ್ಡೆ–ಗೆಣಸು ಪ್ರಾಣಿ–ಪಕ್ಷಿಗಳನ್ನು ಭೇಟೆಯಾಡುತ್ತಾ ಆಹಾರ ಸಂಗ್ರಹಣೆಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುತ್ತಿದ್ದ ಮಾನವ ತಮ್ಮ ಜೀವನವನ್ನು ಸಾಗಿಸಲು ಒಂದು ಕಡೆ ನೆಲೆ ನಿಂತು ಪಶುಪಾಲನೆ ಮಾಡುವುದನ್ನು ಕಲಿತನು. ಇದರಿಂದ ಆನಾದಿ ಕಾಲದಿಂದಲೂ ವ್ಯವಸಾಯ ಮಾಡುವುದು ಈ ಸಮುದಾಯದಲ್ಲಿ ರೂಢಿಯಲ್ಲಿದೆ. ನಂತರ ಒಂದುಕಡೆ ನೆಲೆ ನಿಂತು ತನ್ನ ಸುತ್ತ ಮುತ್ತಿನ ಬೆಟ್ಟಗುಡ್ಡಗಳನ್ನು, ಕಾಡುಗಳನ್ನು ಅಸನು ಮಾಡಿ ಕೃಷಿ ಭೂಮಿಯನ್ನಾಗಿ ಮಾಡಿಕೊಂಡು ವ್ಯವಸಾಯ ಮಾಡಲು ಪ್ರಾರಂಭಿಸಿದರು.

ವ್ಯವಸಾಯ ಮಾಡಲು ಹಿಂದೆ ಪಿಕಾಸಿ, ಕೈಗುದ್ದಲಿ, ಗುದ್ದಲಿ ಮುಂತಾದ ಪರಿಕರಗಳನ್ನು ಬಳಸುತ್ತಿದ್ದನು. ನಂತರ ಮರದಿಂದ ತಯಾರಿಸಿದ ಪರಿಕರಗಳು ಮತ್ತು ಕಬ್ಬಿಣದಿಂದ ತಯಾರಿಸಿದ ಪರಿಕರಣಗಳನ್ನು ಬಳಸಿದನು. ಪ್ರಾಣಿಗಳನ್ನು ಪಳಗಿಸಿ ಕೃಷಿಗೆ ಬಳಸತೊಡಿಗಿದನು. ಪ್ರಸ್ತುತ ಆಧುನಿಕಯುಗದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಬಳಸುವುದರ ಮೂಲಕ ವ್ಯವಸಾಯ ಮಾಡುತ್ತಾರೆ.

***Please cite this article as:*** ರಾಜೇಂದ್ರ ಕುಮಾರ್. (2022). ಆದಿಕರ್ನಾಟಕ ಸಮುದಾಯದ ಕೃಷಿ ಜೀವನ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(3), 115–120.

ಎಡ್ಗರ್ ಥರ್ಸ್ಟನ್ ಹೊಲೆಯ ಸಮುದಾಯವನ್ನು ಕುರಿತು ಹೊಲೆಯರೆಂದರೆ ಹೊಲದ ಒಡೆಯ, ಭೂಮಿ ಮಾಲೀಕ ಎಂದು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಕಾಲಾಂತರದಲ್ಲಿ ಅವರು ಎಲ್ಲವನ್ನು ಕಳೆದುಕೊಂಡು ನಿರ್ಗತಿಕರಾಗಿ ಒಂದೊತ್ತಿನ ಊಟಕ್ಕೂ ಪರದಾಡಿರುವುದನ್ನು ಇತಿಹಾಸದ ದಾಖಲೆಗಳಿಂದ ತಿಳಿದುಕೊಳ್ಳಬಹುದಾಗಿದೆ. ಹಾಗಾಗಿ ಅಸ್ಪೃಸ್ಯರು ಭೂರಹಿತವಾಗಿರುವುದು ಕಾಕತಾಳೀಯವೇನಲ್ಲ. ಅದು ಸಾಮಾಜಿಕ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಕೊಡುಗೆಯೂ ಆಗಿದೆ. ಈ ಹಿನ್ನಲೆಯಲ್ಲಿ ಮನುಷ್ಯನನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುವ ಕ್ರಮವು ನಾಶವಾಗಲೇಬೇಕು ಎಂದು ಡಾ. ಬಿ.ಆರ್. ಅಂಬೇಡ್ಕರ್ ಹೇಳಿದ್ದರು. ಮುಂದುವರೆದು ಅಸ್ಪೃಶ್ಯತೆ ಪರಿಹಾರಕ್ಕೆ ವ್ಯಾಪಕ ಕೈಗಾರೀಕರಣ ಮತ್ತು ಭೂಮಿಯ ಸಮಾನ ಹಂಚಿಕೆ, ಇವೆರಡು ಮಾರ್ಗಗಳನ್ನು ಅಂಬೇಡ್ಕರ್ ಸೂಚಿಸಿದ್ದಾರೆ.ಅಸ್ಪೃಶ್ಯತೆ ಕೃಷಿ ಅರ್ಥವ್ಯವಸ್ಥೆಯೊಡನೆ ಸಂಬಂಧ ಹೊಂದಿದೆ. ಆದಕಾರಣ ಕೈಗಾರೀಕರಣವಾಗಬೇಕು. ಅಸ್ಪೃಶ್ಯರಿಗೆ ಸಾಮಾಜಿಕ ಸ್ಥಾನಮಾನ ದೊರೆಯಬೇಕಾದರೆ ಅವರು ಭೂ ಒಡೆಯರಾಗಬೇಕು. ಇದಕ್ಕೆ ಭೂಮಿಯನ್ನು ಅಸ್ಪೃಸ್ಯರು ನೀಡುವ ವ್ಯವಸ್ಥೆಯಾಗಬೇಕೆಂದು ಅಂಬೇಡ್ಕರ್‌ರವರು ಘೋಷಿಸಿದ್ದಾರೆ. ಅಂತೆಯೇ ವ್ಯವಸಾಯವನ್ನು ಒಂದು ಕೈಗಾರಿಕೆಯಾಗಿ ಪರಿಗಣಿಸಿದ ಅಂಬೇಡ್ಕರ್ ಅವರು ಭೂ ರಹಿತ ಕೃಷಿ ಕಾರ್ಮಿಕರುಗಳನ್ನು ಗುರುತಿಸಿ ಅವರ ಏಳ್ಗೆಗಾಗಿ ಕೆಲವು ಆರ್ಥಿಕ ಯೋಜನೆಗಳನ್ನು ಸಿದ್ಧಪಡಿಸಿದರು.

**ಕೋಷ್ಟಕ 1: ಮೈಸೂರು ಜಿಲ್ಲೆಯ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯ ವಿವರ**

| ಕ್ರಮ ಸಂ | ತಾಲೂಕಿನ ಹೆಸರು | ನಗರ | | | ಗ್ರಾಮೀಣ | | | ಒಟ್ಟು ಜನಸಂಖ್ಯೆ |
|---|---|---|---|---|---|---|---|---|
| | | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | |
| **01** | **ಹೆಚ್.ಡಿ.ಕೋಟೆ** | 3214 | 3317 | 6531 | 33564 | 33168 | 66732 | 73263 |
| **02** | **ಹುಣಸೂರು** | 4354 | 4497 | 8851 | 22500 | 22048 | 44548 | 53399 |
| **03** | **ಕೆ.ಆರ್.ನಗರ** | 2629 | 2630 | 5259 | 16255 | 16389 | 32644 | 37903 |
| **04** | **ಮೈಸೂರು** | 58523 | 57923 | 116446 | 25274 | 24613 | 49887 | 166333 |
| **05** | **ನಂಜನಗೂಡು** | 4670 | 4887 | 9557 | 38870 | 38668 | 77538 | 87095 |
| **06** | **ಪಿರಿಯಾಪಟ್ಟಣ** | 709 | 774 | 1483 | 20501 | 19841 | 40342 | 41825 |
| **07** | **ಟಿ.ನರಸೀಪುರ** | 4000 | 4128 | 8128 | 34268 | 34429 | 68697 | 76825 |
| | **ಒಟ್ಟು** | 78099 | 78156 | 156255 | 191232 | 189156 | 380388 | 536643 |

**ಮೂಲ: 2011ರ ಜನಗಣತಿ ವರದಿ**

ಕೋಷ್ಟಕ 1ರಲ್ಲಿ ಮೈಸೂರು ಜಿಲ್ಲೆಯಲ್ಲಿರುವ ಒಟ್ಟು ಜನಸಂಖ್ಯೆಯನ್ನು ನೀಡಲಾಗಿದೆ. ನಗರ ಪ್ರದೇಶಗಳಲ್ಲಿ ವಾಸಮಾಡುತ್ತಿರುವವರ ಸಂಖ್ಯೆ ಮತ್ತು ಗ್ರಾಮೀಣ ಭಾಗದಲ್ಲಿ ವಾಸವಿರುವ ಜನಸಂಖ್ಯೆಯ ಪ್ರಮಾಣದ ಜೊತೆಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಇರುವ ಭಿನ್ನತೆಯ ಜನಸಂಖ್ಯೆಯ ಪ್ರಮಾಣವನ್ನು ಮೇಲಿನ ಕೋಷ್ಟಕ ದಿಂದ ತಿಳಿಯಬಹುದಾಗಿದೆ. ಮೈಸೂರು ಜಿಲ್ಲೆಯು 5,36,643ರಷ್ಟು ಪರಿಶಿಷ್ಟಜಾತಿ ಒಟ್ಟುಜನಸಂಖ್ಯೆಯನ್ನು ಹೊಂದಿದೆ. ಈ ಒಟ್ಟುಜನಸಂಖ್ಯೆಯನ್ನು ತಾಲೂಕುವಾರು ಜನಸಂಖ್ಯೆಗೆ ಹೋಲಿಕೆ ಮಾಡಿದಾಗ ಮೈಸೂರು ತಾಲೂಕಿನ ನಗರ ಪ್ರದೇಶದಲ್ಲಿ ಹೆಚ್ಚು ಪರಿಶಿಷ್ಟಜಾತಿ ಜನಸಂಖ್ಯೆ ಇರುವುದು ಅಂಕಿ–ಅಂಶಗಳಿಂದ ದೃಢಪಟ್ಟಿದೆ. ಅಂತೆಯೇ ಗ್ರಾಮೀಣ ಪ್ರದೇಶದ ಜನಸಂಖ್ಯೆಯನ್ನು ಗಮನಿಸಿದಾಗ ನಂಜನಗೂಡು ತಾಲೂಕಿನಲ್ಲಿ ಹೆಚ್ಚು ಪರಿಶಿಷ್ಟ ಜಾತಿಯ ಜನಸಂಖ್ಯೆಯನ್ನು ಹೊಂದಿರುವುದರ ಜೊತೆಗೆ ಟಿ.ನರಸೀಪುರ ಎರಡನೆಯ ಸ್ಥಾನದಲ್ಲಿರುವುದು

ಕಂಡುಬಂದಿದೆ. ಹೆಚ್.ಡಿ.ಕೋಟೆ ತಾಲೂಕು, ಮೂರನೆಯ ಸ್ಥಾನದಲ್ಲಿರುವುದು ಅಂಕಿ-ಅಂಶಗಳಿಂದ ತಿಳಿಯುತ್ತದೆ. ಈ ಮೂರು ತಾಲೂಕುಗಳಲ್ಲಿ ಪರಿಶಿಷ್ಟಜಾತಿಯ ಜನಸಂಖ್ಯೆ ಹೆಚ್ಚು ಇರುವುದರ ಜೊತೆಗೆ ಈ ತಾಲೂಕುಗಳು ವಿಧಾನಸಭಾ ಮೀಸಲು ಕ್ಷೇತ್ರಗಳಾಗಿ ಮಾರ್ಪಾಡುಗೊಂಡಿರುವುದು ಒಂದು ಗಮನಾರ್ಹ ವಿಷಯವಾಗಿದೆ. ಇಲ್ಲಿ ಹೆಚ್ಚು ಪರಿಶಿಷ್ಟ ಜಾತಿ ಜನಸಂಖ್ಯೆ ಇರುವುದೇ ಇದಕ್ಕೆ ಬಹುಮುಖ್ಯವಾದ ಕಾರಣವಾಗಿದೆ. ಇನ್ನುಳಿದಂತೆ ಹುಣಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ ತಾಲ್ಲೂಕುಗಳು ಕ್ರಮೇಣ ಪರಿಶಿಷ್ಟಜಾತಿ ಜನಸಂಖ್ಯೆಯಲ್ಲಿ ಕಡಿಮೆ ಪ್ರಮಾಣ ಹೊಂದಿರುವುದು ಅಂಕಿ-ಅಂಶಗಳ ಪಟ್ಟಿಯಿಂದ ತಿಳಿದುಬಂದಿದೆ. ಪಿರಿಯಾಪಟ್ಟಣ ತಾಲೂಕಿನ ನಗರ ವ್ಯಾಪ್ತಿಯಲ್ಲಿ ಅತ್ಯಂತ ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದು, ಇಡೀ ತಾಲೂಕಿಗೆ ಹೋಲಿಕೆ ಮಾಡಿದಾಗ ಅತ್ಯಂತ ಕಟ್ಟಕಡೆಯಲ್ಲಿರುವುದು ತಿಳಿದಿದೆ. ಮೀಸಲು ಕ್ಷೇತ್ರಗಳಾದ ನಂಜನಗೂಡು ತಾಲೂಕಿನಲ್ಲಿ ಒಟ್ಟು 87,095 ರಷ್ಟು ಜನಸಂಖ್ಯೆಯನ್ನು ಟಿ.ನರಸೀಪುರ ತಾಲೂಕಿನಲ್ಲಿ 76825 ರಷ್ಟು ಜನಸಂಖ್ಯೆಯನ್ನು ಹಾಗೆಯೇ ಹೆಚ್.ಡಿ.ಕೋಟೆಯಲ್ಲಿ ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿರುವುದು ಗಮನಾರ್ಹ ಸಂಗತಿಯಾಗಿದೆ. ಮೈಸೂರು ಜಿಲ್ಲೆಯಲ್ಲಿ ಆದಿ ಕರ್ನಾಟಕ (ಹೊಲೆಯ), ಆದಿ ದ್ರಾವಿಡ, ಆದಿ ಜಾಂಬವ ಸಮುದಾಯಗಳು ನೆಲೆಸಿವೆ ಈ ಜನರ ಪ್ರಮುಖ ಕಸಬು ಕೃಷಿ ಕೂಲಿ ಮತ್ತು ವ್ಯವಸಾಯವಾಗಿದೆ.

**ಆದಿಕರ್ನಾಟಕ ಸಮುದಾಯದ ಕೃಷಿ-ಜೀವನ**

ರೈತನಿಗೆ ವ್ಯವಸಾಯ ಎನ್ನುವುದು ಎಷ್ಟು ಮುಖ್ಯವೋ ವ್ಯವಸಾಯಕ್ಕೆ ಸಂಬಂಧಿಸಿದ ಉಪಕರಣಗಳು/ಪರಿಕರಗಳು ಅಷ್ಟೇ ಅತಿ ಮುಖ್ಯವಾದವು. ಯಾವುದೇ ಒಂದು ಬೆಳೆಯನ್ನು ಬೆಳೆಯಬೇಕಾದರೆ ಒಂದೊಂದು ವಿಧಾನವಿರುತ್ತದೆ. ಆ ವಿಧಾನಕ್ಕೆ ತಕ್ಕಂತೆ ಆ ಉಪಕರಣಗಳು ಅಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುತ್ತವೆ. ಸಾಮಾನ್ಯವಾಗಿ ಆದಿಕರ್ನಾಟಕ ಸಮುದಾಯದವರು ನೀರಾವರಿ ಬೇಸಾಯಕ್ಕಿಂತ ಒಣಬೇಸಾಯವನ್ನು ಮಾಡುವವರ ಪ್ರಮಾಣ ಅಧಿಕವಾಗಿದೆ. ಈ ಸಮುದಾಯದ ಶೇ.80ಕ್ಕೂ ಹೆಚ್ಚು ರೈತರು ವ್ಯವಸಾಯಕ್ಕೆ ಮಳೆಯನ್ನೇ ಅವಲಂಬಿಸಿದ್ದು, ವರ್ಷಕ್ಕೆ ಒಂದು ಪ್ರಮುಖ ಬೆಳೆ ಮತ್ತು ಉಪ-ಬೆಳೆಯನ್ನು ಬೆಳೆಯುತ್ತಾರೆ. ಕೃಷಿಯಲ್ಲಿ ಆಧುನಿಕ ಪದ್ಧತಿ ಮುಂದುವರೆದಿದ್ದರೂ ಕೂಡ ಇಂದಿಗೂ ಕೂಡ ಸಾಂಪ್ರದಾಯಿಕ ಉಪಕರಣಗಳನ್ನು ಬಳಸುವುದು ರೂಢಿಯಲ್ಲಿದೆ.

ಸಾಮಾನ್ಯವಾಗಿ ಇವರು ನೇಗಿಲು, ಕುಂಟೆ, ಹಲುಬು, ಹೆಗ್ಗುಂಟೆ, ಹತ್ತುಗುಂಟೆ, ಎಡೆಗುಂಟೆ, ಸೀಳುಗುಂಟೆ, ಕುರ್ಗಿ, ಗುದ್ದಲಿ, ಕೈಗುದ್ದಲಿ, ಮಂಮ್ಟಿ, ಕುಕ್ಕೆ/ಮುಸಣಿಕುಕ್ಕೆ(ಮಾಸ್ಕ್), ಎತ್ತಿನಗಾಡಿ, ಕಣ, ಕೊಂಗ/ಮೊರೆ, ಝುರಡಿ, ಗುಂಡುಕಲ್ಲು, ಮೆರೆಕಡ್ಡಿ/ಕೊಡತಿ(ಚಿ), ಮುಂತಾದವುಗಳನ್ನು ಕೃಷಿಗೆ ಬಳಸುವುದು ಕಂಡು ಬರುತ್ತದೆ.

**ನೇಗಿಲು:** ಪಾಳು ಬಿದ್ದ ಭೂಮಿಯನ್ನು ಹಸನು ಮಾಡಲು ಬಳಸುತ್ತಾರೆ.

**ನೊಗೆ:** ಎತ್ತಿನ ಹೆಗಲ ಮೇಲೆ ಇಟ್ಟು ನೇಗಿಲು ಕಟ್ಟುತ್ತಾರೆ.

**ಕುರ್ಗಿ/ಶೇಡ್ಡಿ:** ಜೋಳ ನವಣೆ ಹುರುಳಿ ಇತರೆ ಬೀಜಗಳನ್ನು ಸಾಲಿನ ರೂಪದಲ್ಲಿ ಬಿತ್ತನೆ ಮಾಡಲು ಬಳಸುತ್ತಾರೆ

**ಮಿಣಮನ:** ಕುರ್ಗಿಗೆಕಟ್ಟುವ ವಸ್ತುಗಳು ಅಗ್ಗ ಬಾರ್ಕೋಲು.

**ಹೆಗ್ಗುಂಟೆ/ಕುಂಟೆ:** ನೇಗಿಲು ಹೊಡೆದ ಮೇಲೆ ಬರುವ ಕಳೆಯನ್ನು ತೆಗೆದು ಭೂಮಿಯನ್ನು ಸಮತಟ್ಟಾಗಿ ಮಾಡಲು ಬಳಸುತ್ತಾರೆ.

**ಹತ್ತುಗುಂಟೆ/ಹಲುಬ:** ಬಿತ್ತನೆ ಬೀಜ ಹಾಕಿದ ನಂತರ ಪೈರು ಬಂದಾಗ ಪೈರುಗಳ ನಡುವಿನ ಕಳೆಯನ್ನು ತೆಗೆಯಲು ಬಳಸುತ್ತಾರೆ. (ದೊಡ್ಡ ಸಾಲುಗಳಿಗೆ)

**ಎಡೆಗುಂಟೆ/ಎರಡು ಹಲ್ಲಿನಕುಂಟೆ:** ಬಿತ್ತನೆ ಮಾಡಿ ಪೈರು ಬಂದಾಗ ಕಳೆ ತೆಗೆಯಲುಇದನ್ನು ಬಳಸುತ್ತಾರೆ.(ಚಿಕ್ಕ ಸಾಲುಗಳಿಗೆ)

**ಸೀಳುಗುಂಟೆ/ಕೊಣ್ಣೆ ನೇಗಿಲು:** ಬೆಳೆಗಳ ಮದ್ಯ ಕಳೆ ತೆಗೆಯಲು ಬಳಸುತ್ತಾರೆ.

**ಕುರ್ಚಿಗೆ/ಕಳಾರಿ:** ಕಳೆಯನ್ನು ಕೇತ್ತುವಉಪಕರಣ.

**ಗುದ್ದಲಿ:** ಗಿಡ ಮರಗಳ ಬೇರುಗಳನ್ನು ತೆಗೆದು ಭೂಮಿಯನ್ನು ಹಸನು ಮಾಡಲು ಬಳಸುತ್ತಾರೆ

**ಕೈಗುದ್ದಲಿ:** ಗಿಡದ ಸೂತ್ತ ಕಳೆಯನ್ನು ತೆಗೆಯುವ ಸಾಧನ.

**ಮಂಮ್ಟಿ:** ಕೃಷಿ ಭೂಮಿಯನ್ನ ಸಮತಟ್ಟಾಗಿ ಮಾಡಲು, ಬದು ನಿರ್ಮಸಲು ಬಳಸುತ್ತಾರೆ.

**ಕುಕ್ಕೆ/ಮುಸಣಿಕುಕ್ಕೆ(ಮಾಸ್ಕ್):** ಹಸು ಕರುಗಳು ಗಿಡವನ್ನು ಹಾಳು ಮಾಡದಿರಲಿ ಎಂದುಎತ್ತಿನ ಬಾಯಿಗೆ ಕಟ್ಟುವ ಸಾಧನ.

**ಎತ್ತಿನಗಾಡಿ:** ಬೆಳೆದ ಬೆಳೆಯನ್ನು, ಗೊಬ್ಬರ ಮತ್ತು ಹುಲ್ಲನ್ನು ಸಾಗಿಸುವ ಸಾಧನ.

**ಕಣ:** ದವಸ ಧಾನ್ಯಗಳನ್ನು ಒಕ್ಕಣೆ ಮಾಡುವ ಸ್ಥಳ.

**ಕೊಂಗ/ಮೊರೆ:** ದವಸ ಧಾನ್ಯಗಳನ್ನು ತೂರಲು ಬಳಸುವ ಸಾಧನ.

**ಝುರಡಿ:** ದವಸ ಧಾನ್ಯಗಳನ್ನು ಸ್ವಚ್ಚಗೊಳಿಸಲು ಪ್ರಾರಂಭಿಸುತ್ತಾರೆ.

**ಗುಂಡುಕಲ್ಲು:** ಬೆಳೆದ ಬೆಳೆಯನ್ನು ಒಕ್ಕಣೆ ಮಾಡುವಾಗ ಬಳಸುವ ಸಾಧನ.

**ಮೆರೆಕಡ್ಡಿ/ಕೊಡತಿ(ಚಿ):** ಹುಲ್ಲು ಮತ್ತು ಜೊಳದ ಕಡ್ಡಿಗಳನ್ನು ಧಾನ್ಯದಿಂದಬೇರ್ಪಡಿಸಲು ಬಳಸುವ ಸಾಧನ.

ಆದಿಕರ್ನಾಟಕ ಸಮುದಾಯದವರ ಕೃಷಿ ಜೀವನವನ್ನು ಗಮನಿಸಿದಾಗ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಅತಿ ಹೆಚ್ಚಾಗಿ ಹತ್ತಿ, ಜೋಳ, ರಾಗಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಇಲ್ಲಿನ ರೈತರು ತಾವು ಬೆಳೆದ ತರಕಾರಿಗಳನ್ನು ಮಾರಾಟ ಮಾಡಲು ಕೋಟೆ, ಹಂಪಾಪುರ, ಹ್ಯಾಂಡ್‌ಪೋಸ್ಟ್, ಸರಗೂರುಗಳಲ್ಲಿ ನಡೆಯುವ ಸಂತೆಗಳ ಸಂದರ್ಭದಲ್ಲಿ ಮಾರಾಟ ಮಾಡುತ್ತಾರೆ. ಹಾಗೆಯೇ ಹ್ಯಾಂಡ್‌ಪೋಸ್ಟ್‌ನಲ್ಲಿ ಆಡು (ಮೇಕೆ), ಕುರಿ, ದನಗಳ ಸಂತೆಯು ನಡೆಯುತ್ತದೆ. ಇಲ್ಲಿ ದನಗಳ ಮಾರಾಟವು ಸಹ ಹೆಚ್ಚಿನ ರೀತಿಯಲ್ಲಿದೆ. ಈ ತಾಲೂಕಿನ ವ್ಯಾಪ್ತಿಯಲ್ಲಿ ಮಾರುಕಟ್ಟೆ ವ್ಯವಸ್ಥೆ ಇದ್ದರೂ ಕೂಡ ಬಹಳ ಮುಖ್ಯವಾಗಿ ಬೆಳೆಯುವ ಬೆಳೆಗಳನ್ನು ಅಂದರೆ ಹತ್ತಿ ಬೆಳೆಯನ್ನು ಮಾರಾಟ ಮಾಡಬೇಕಾದರೆ ಅನ್ಯ ರಾಜ್ಯವಾದ ತಮಿಳುನಾಡಿನ ವರ್ತಕರಿಗೆ ಮಾರಾಟ ಮಾಡುವ ಪರಿಸ್ಥಿತಿಯಿದೆ.ಇದರಿಂದ ತಾವು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆಯಿಲ್ಲದೆ, ನಷ್ಟ ಅನುಭವಿಸಿರುವುದು ತಿಳಿದುಬಂದಿದೆ. ಹಾಗೆಯೇ ತಮ್ಮ ಕೃಷಿ ಭೂಮಿಗೆ ಸರ್ಕಾರದ ಯೋಜನೆಗಳಿಂದ ಕೊಳವೆ ಬಾವಿ ಮೂಲಕ ನೀರಾವರಿಯನ್ನು ಅಳವಡಿಸಿಕೊಂಡಿದ್ದು, ಕೆಲವು ಭಾಗಗಳಲ್ಲಿ ಮಾತ್ರ ತರಕಾರಿ ಬೆಳೆಗಳನ್ನು ಬೆಳೆಯುವ ರೈತರನ್ನು ಗುರುತಿಸಲಾಗಿದೆ. ಬೇಸಿಗೆಯಲ್ಲಿಯೂ ಕೂಡ ರೈತ ಉತ್ತಮ ಇಳುವರಿಯನ್ನು

ಪಡೆದರೂ ಸಹ ತಾವು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗದೇ ನಷ್ಟ ಅನುಭವಿಸಿರುವ ಬಗೆಗೆ ಆ ತಾಲೂಕಿನ ಯರಹಳ್ಳಿ ಗ್ರಾಮದ ವೆಂಕಟಸ್ವಾಮಿ ಬಿನ್ ಚಿಕ್ಕಣ್ಣನವರು ಮಾಹಿತಿಯನ್ನು ನೀಡಿರುತ್ತಾರೆ.· ಇದೇ ತಾಲೂಕಿನ ಜನತಾ ಕಾಲೋನಿಯ ಪುಟ್ಟಯ್ಯನವರು ತಮ್ಮ ಜಮೀನಿನಲ್ಲಿ ವ್ಯವಸಾಯವನ್ನೇ ಪ್ರಧಾನವಾಗಿ ಅವಲಂಭಿಸಿದ್ದು, ಇದರ ಜೊತೆಗೆ ಪಶುಸಂಗೋಪನೆ ಮತ್ತು ರೇಷ್ಮೆ ಬೆಳೆ ಹಾಗೂ ಇನ್ನಿತರ ತರಕಾರಿ ಬೆಳೆಗಳನ್ನು ಬೆಳೆಯುವ ಮೂಲಕ ಆರ್ಥಿಕ ಸ್ಥಿತಿಯು ಸುಧಾರಣೆಯಾಗಿರುವುದರ ಬಗೆಗೆ ತಿಳಿಸಿರುತ್ತಾರೆ. ಅಂತೆಯೇ ಈ ತಾಲೂಕಿನ ಭೂ ಹಿಡುವಳಿದಾರರು ಆರ್ಥಿಕ ಹಿನ್ನಡೆ ಅನುಭವಿಸಿರುವ ಜೊತೆಗೆ ಆರ್ಥಿಕ ಸ್ಥಿತಿಯು ಸುಧಾರಣೆಯಾಗಿರುವ ಬಗೆಗೆ ಮಾಹಿತಿಯನ್ನು ನೀಡಿರುತ್ತಾರೆ. ಈ ಅಂಶಗಳನ್ನು ಆಧರಿಸಿ ಸಂಶೋಧನೆ ನಡೆಸಿದಾಗ ಈ ತಾಲೂಕಿನಲ್ಲಿ ನೀರಾವರಿಗೆ ಸಂಬಂಧಪಟ್ಟಂತೆ ಕಪಿಲಾ ಜಲಾಶವನ್ನು ಹೊಂದಿದ್ದರೂ ಈ ಪ್ರದೇಶದ ಪರಿಶಿಷ್ಟಜಾತಿ ಭೂಹಿಡುವಳಿದಾರರಿಗೆ ಕಡಿಮೆ ಪ್ರಮಾಣದಲ್ಲಿ ಸಹಾಯಕವಾಗಿರುವುದು ಕಂಡುಬಂದಿದೆ. ಹಾಗೆಯೇ ಇದು ಬೇರೆ ತಾಲೂಕುಗಳಾದ ನಂಜನಗೂಡು, ನರಸೀಪುರ ತಾಲೂಕುಗಳಿಗೆ ವರದಾನವಾಗಿದೆ. ಈ ನೀರಾವರಿ ವ್ಯವಸ್ಥೆಯು ಕೂಡ ಆರ್ಥಿಕ ಸ್ಥಿತಿಗತಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಾಗಿದೆ. ಇದರ ಜೊತೆಗೆ ಈ ಪ್ರದೇಶದಲ್ಲಿನ ಜನರು ಹೆಚ್ಚು ಕೂಲಿಯನ್ನು ಅವಲಂಬಿಸಿದ್ದು, ಇತರೆ ತಾಲೂಕುಗಳಿಗೆ ವಲಸೆ ಹೋಗಿರುವುದು ಸಹ ತಿಳಿದುಬಂದಿದೆ.

ಹುಣಸೂರು ತಾಲೂಕು ಅರಣ್ಯ ಪ್ರದೇಶದಿಂದ ಕೂಡಿದ್ದು, ಈ ಪ್ರದೇಶದ ಜನರು ಕಾಡು ಪ್ರಾಣಿಗಳ ಹಾವಳಿಗೆ ತುತ್ತಾಗುವುದರ ಜೊತೆಗೆ ತಾವು ಬೆಳೆದ ಬೆಳೆಗಳಿಗೂ ಹಾನಿಯುಂಟಾಗುತ್ತಿರುವುದು ತಿಳಿದುಬಂದಿದೆ. ಈ ಭಾಗದಲ್ಲಿ ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳು ಅಸ್ತಿತ್ವದಲ್ಲಿವೆ. ಈ ಕಾರಣವಾಗಿ ಇಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಹೆಚ್ಚಿನ ಪ್ರಮಾಣದಲ್ಲಿದ್ದು, ಇದರ ಜೊತೆಗೆ ಎಪಿಎಲ್ ಕುಟುಂಬಗಳು ಸಹ ಕಂಡುಬಂದಿವೆ. ಈ ಪ್ರದೇಶವು ನೀರಾವರಿ ವ್ಯವಸ್ಥೆಯಲ್ಲಿ ಹಿಂದುಳಿದಿದ್ದು, ಇಲ್ಲಿ ಕೊಳವೆ ಬಾವಿಗಳ ಮೂಲಕ ನೀರಾವರಿ ಬೇಸಾಯವನ್ನು ಅನುಸರಿಸುತ್ತಿದ್ದಾರೆ. ಈ ಭಾಗದಲ್ಲಿ ಲಕ್ಷ್ಮಣತೀರ್ಥ ನದಿಯು ಹರಿದರೂ ಸಹ ಇದರ ಪ್ರಯೋಜನದ ಫಲ ಕಡಿಮೆ ಪ್ರಮಾಣದಲ್ಲಿದೆ.ಹೀಗಾಗಿ ಖುಷ್ಕಿ, ತರಿ, ಬಾಗಾಯತ್, ಭೂ ಲಕ್ಷಣವನ್ನು ಹೊಂದಿದೆ. ಇಲ್ಲಿ ತಂಬಾಕು ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಹಾಗೆಯೇ ದವಸ-ಧಾನ್ಯಗಳಾದ ತೊಗರಿ, ಅವರೆ, ಹುರುಳಿ, ಕಾಳುಗಳನ್ನು ಈ ಪ್ರದೇಶದಲ್ಲಿ ಬೆಳೆಯುತ್ತಿರುವುದು ಕಂಡುಬಂದಿದೆ. ಕೃಷಿಯೇ ಮುಖ್ಯ ಕಸುಬಾಗಿದ್ದು, ಇಲ್ಲಿ ಸಣ್ಣ ಹಿಡುವಳಿದಾರರ ಸಂಖ್ಯೆಯು ಹೆಚ್ಚಿರುವುದು ತಿಳಿದುಬಂದಿದೆ. ತಾವು ಬೆಳೆದ ಧಾನ್ಯಗಳನ್ನು ಮತ್ತು ತರಕಾರಿಗಳನ್ನು ಕೃಷಿ ಮಾರುಕಟ್ಟೆ ಮತ್ತು ಬನ್ನಿಕುಪ್ಪೆ ಸಂತೆ ಮತ್ತು ಹೋಬಳಿ ಕೇಂದ್ರವಾದ ಹನಗೂಡಿನಲ್ಲಿ ಮಾರಾಟ ಮಾಡುತ್ತಾರೆ.

ಪಿರಿಯಾಪಟ್ಟಣ ಈ ತಾಲೂಕು ಮೈಸೂರು ಜಿಲ್ಲೆಯಲ್ಲಿ ಬರುವ ತಾಲೂಕುಗಳಲ್ಲಿಯೇ ಅತ್ಯಂತ ಚಿಕ್ಕ ತಾಲ್ಲೂಕಾಗಿದೆ.ಹಾಗೆಯೇ ಸಾಮಾಜಿಕವಾಗಿಯೂ ಕೂಡ ಹಿಂದುಳಿದಿರುವುದು ಕಂಡುಬಂದಿದೆ. ಇಲ್ಲಿಯೂ ಸಹ ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳು ನೆಲೆಸಿದ್ದು, ಕುಟುಂಬದ ಹಿರಿಯನೇ ಮನೆಯ ಯಜಮಾನನಾಗಿರುತ್ತಾನೆ. ಸಾಮಾನ್ಯವಾಗಿ ಈ ಭಾಗದಲ್ಲಿ ಸಣ್ಣ ಹಿಡುವಳಿದಾರರ ಸಂಖ್ಯೆ ಹೆಚ್ಚಾಗಿದ್ದು, ಈ ಪ್ರದೇಶವು ಮಳೆಯಾಶ್ರಿತ ಪ್ರದೇಶದಿಂದ ಕೂಡಿದೆ. ಈ ತಾಲೂಕಿನ ಒಂದು ವೈಶಿಷ್ಟ್ಯವೇನೆಂದರೆ ಬೈಲುಕುಪ್ಪೆಯಲ್ಲಿ ಬೌದ್ಧವಿಹಾರವನ್ನು ಹೊಂದಿದ್ದು, ಇದು ಪ್ರವಾಸೋದ್ಯಮಕ್ಕೆ ಪ್ರಸಿದ್ಧಿಯಾಗಿದೆ. ಈ ಪ್ರದೇಶದಲ್ಲಿ ಹಿಂದುಳಿದ ವರ್ಗ ಹಾಗೂ ಒಕ್ಕಲಿಗ ಸಮುದಾಯಕ್ಕೆ ಸೇರಿದ ಜನ ಸಮುದಾಯಗಳು

ಹೆಚ್ಚಿನ ರೀತಿಯಲ್ಲಿದೆ. ಬಡತನ ರೇಖೆಗಿಂತ ಕೆಳಗಿರುವ ಜನ ಸಮುದಾಯಗಳು ಹೆಚ್ಚು ಕಂಡುಬಂದಿವೆ. ಸರ್ಕಾರದಿಂದ ಹತ್ತು ಹಲವಾರು ಯೋಜನೆಗಳನ್ನು ನೀಡಿದರು ಸಹ ಇನ್ನೂ ಕೂಡ ಗುಡಿಸಲು ಮತ್ತು ಕಲ್ನಾರ್ ಸೀಟ್ ಮನೆಗಳು ಕಂಡುಬಂದಿವೆ. ಇಲ್ಲಿನ ಜನರ ಮುಖ್ಯ ಕಸುಬು ಕೃಷಿ ಮತ್ತು ಕೂಲಿಯಾಗಿದ್ದು, ಪಕ್ಕದ ಜಿಲ್ಲೆಯಾದ ಕೊಡಗಿನ ಕಾಫಿ ತೋಟಗಳಲ್ಲಿ ಕೂಲಿಗಾಗಿ ವಲಸೆ ಹೋಗುತ್ತಿರುವುದು ಸಹ ತಿಳಿದುಬಂದಿದೆ. ಈ ಭಾಗದ ಜನರು ಇನ್ನೂ ಕೂಡ ಮೌಢ್ಯದ ಆಚರಣೆಗಳಲ್ಲಿ ತೊಡಗಿರುವುದು ಇವರ ಅಭಿವೃದ್ಧಿಗೆ ಹಿನ್ನೆಡೆಯಾಗಿದೆ.ಇಲ್ಲಿ ಪ್ರಮುಖವಾಗಿ ಆಚರಿಸುವ ಹಬ್ಬಗಳೆಂದರೆ ಮಸಣಮ್ಮನ ಜಾತ್ರೆ, ಪಿರಿಯಾಪಟ್ಟಣದಮ್ಮ ಜಾತ್ರೆ, ಪ್ರಮುಖವಾಗಿದ್ದು ಈ ದೇವರುಗಳಿಗೆ ಹಂದಿಯನ್ನು ಬಲಿಕೊಡುತ್ತಾರೆ. ಈ ಪ್ರದೇಶದ ಜನರ ಪ್ರಮುಖ ಆಹಾರ ಬೆಳೆಗಳೆಂದರೆ ರಾಗಿ, ಜೋಳ, ವಾಣಿಜ್ಯ ಬೆಳೆಗಳಾಗಿ ತಂಬಾಕು ಹಾಗೂ ಹತ್ತಿಯನ್ನು ಬೆಳೆಯುತ್ತಾರೆ. ಹೀಗೆ ತಾವು ಬೆಳೆದ ಬೆಳೆಗಳನ್ನು ಕೃಷಿ ಮಾರುಕಟ್ಟೆ ಮತ್ತು ಪಿರಿಯಾಪಟ್ಟಣದ ಸಂತೆಗಳಲ್ಲಿ ಮಾರಾಟ ಮಾಡುತ್ತಾರೆ. ಇಲ್ಲಿನ ಜನರು ವರ್ಷದ ಆರು ತಿಂಗಳು ವ್ಯವಸಾಯದಲ್ಲಿ ತೊಡಗಿದರೆ, ಹೆಚ್ಚಿನ ರೀತಿಯಲ್ಲಿ ಕೂಲಿ ಕೆಲಸದಲ್ಲಿ ನಿರತರಾಗಿರುವುದು ಕ್ಷೇತ್ರ ಕಾರ್ಯ ಅಧ್ಯಯನದಿಂದ ತಿಳಿದುಬಂದಿದೆ.

**ಉಪಸಂಹಾರ**

ಯಾವುದೇ ಒಂದು ರಾಷ್ಟ್ರ ಅಥವಾ ಜನಾಂಗದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಜೀವನ ಸ್ಥಿರವಾಗಿರದೇ ಕಾಲದಿಂದ ಕಾಲಕ್ಕೆ ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತಿರುತ್ತದೆ. ಹೀಗೆ ಬದಲಾಗುತ್ತಿರುವ ಸಮಾಜದಲ್ಲಿ ಪರಿಶಿಷ್ಟ ಜಾತಿ, ಬುಡಕಟ್ಟು ಮತ್ತು ಹಿಂದುಳಿದ ಸಮುದಾಯಗಳ ಜೀವನ ಸ್ಥಿತಿಗಳು ಕೂಡ ಬದಲಾಗುತ್ತಿವೆ. ಈ ಹಿನ್ನಲೆಯಲ್ಲಿ. ಆದಿಕರ್ನಾಟಕ ಸಮುದಾಯವು ಸಾಮಾಜಿಕವಾಗಿ ಅತ್ಯಂತ ನೋವನ್ನುಂಡಿರುವ ಸಮುದಾಯವಾಗಿದ್ದು, ಇತರ ಸಮುದಾಯಗಳಿಗೆ ಹೋಲಿಸಿದಾಗ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ದುರ್ಬಲವಾದ ವರ್ಗವಾಗಿದೆ. ಸರ್ಕಾರ ಹಾಗೂ ಸಂಘಟನೆಗಳ ಪ್ರಯತ್ನದಿಂದಾಗಿ ಶೈಕ್ಷಣಿಕ ಅರಿವು ಮೂಡುತ್ತಿದ್ದರೂ ಕೂಡ ನಿರೀಕ್ಷಿಸಿದ ಪ್ರಮಾಣದಲ್ಲಿ ಶೈಕ್ಷಣಿಕವಾಗಿ ಮುಂದುವರೆದಿಲ್ಲ. ಜಗತ್ತು ಕ್ಷಣ ಕ್ಷಣಕ್ಕೂ ಬದಲಾಗುತ್ತಿರುವ ಸಂದರ್ಭದಲ್ಲಿ ಈ ಸಮುದಾಯದವರ ಬದಲಾವಣೆ ಅನಿವಾರ್ಯವಾಗಿದೆ. ಇವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಸರ್ಕಾರದ ಪ್ರಯತ್ನದ ಜೊತೆಗೆ ಸಮುದಾಯದವರ ಪ್ರಯತ್ನ ಮತ್ತು ಇತರರ ಸಹಕಾರ ಅಗತ್ಯವಾಗಿದೆ

**ಪರಾಮರ್ಶನ ಗ್ರಂಥಗಳು**


- ವಿಶ್ವೇಶ್ವರಯ್ಯ ತೇ.ಸಿ. (2011). ಕೃಷ್ಣರಾಜನಗರ ತಾಲೂಕು ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
- ಗಿರಿಗೌಡ ನೀ. (2011). *ಹೆಗ್ಗಡದೇವನ ಕೋಟೆ ತಾಲೂಕು ಗ್ಯಾಸೆಟಿಯರ್.* ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
- ರಾಜಶೇಖರ ಪಿ.ಕೆ. (2010). *ಪಿರಿಯಾಪಟ್ಟಣ ತಾಲೂಕು ಗ್ಯಾಸೆಟಿಯರ್.* ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
- ಚಿನ್ನಸ್ವಾಮಿ ಸೋಸಲೆ. (2002). *ದಲಿತರ ಬದುಕು ಮೆಲಕು.* ಪ್ರಸಾರಾಂಗ, ಕನ್ನಡ ವಿ.ವಿ.
- ಹನೂರು ಚನ್ನಪ್ಪ. *ಅನ್ನ.* ಜೋಳಿಗೆ ಪ್ರಕಾಶನ.